# ಉಪನಿರ್ದೇಶಕರ ಕಛೇರಿ,ಶಾಲಾ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.

**10ನೇ ತರಗತಿ** **ಮಾದರಿ ಪ್ರಶ್ನೆ ಪತ್ರಿಕೆ-1** **2024–25**

**ಸಮಯ : ೦೩–೧೫ ಗಂಟೆಗಳು** **ಪ್ರಥಮ ಭಾಷೆ ಕನ್ನಡ** **ಗರಿಷ್ಠ ಅಂಕ - ೧೦೦**

**I) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 X 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅನುನಾಸಿಕಗಳ ಸಂಖ್ಯೆ;
   ಎ) 05 ಬಿ) 25 ಸಿ) 10 ಡಿ) 09
2. '<u>ಅವಳ</u> ನೆಲೆ ಯಾರು ಅರಿಯಿರೇ?' ವಾಕ್ಯದಲ್ಲಿ ಗೆರೆ ಎಳೆದಿರುವ ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ;
   ಎ) ಸರ್ವನಾಮ ಬಿ) ದಿಗ್ವಾಚಕ ಸಿ) ಅನ್ವರ್ಥನಾಮ ಡಿ) ರೂಢನಾಮ
3. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು;
   ಎ) ಅಲ್ಪವಿರಾಮ ಚಿಹ್ನೆ ಬಿ) ಅರ್ಧ ವಿರಾಮ ಚಿಹ್ನೆ ಸಿ) ಭಾವಸೂಚಕ ಚಿಹ್ನೆ ಡಿ) ವಾಕ್ಯವೇಷ್ಟನ ಚಿಹ್ನೆ
4. ಸಾಮಾನ್ಯ ಅವ್ಯಯಕ್ಕೆ ಉದಾಹರಣೆಯಾದ ಪದ ಇದಾಗಿದೆ;
   ಎ) ಅದುವೇ ಬಿ) ಪಟಪಟನೆ ಸಿ) ಚೆನ್ನಾಗಿ ಡಿ) ಹೌದು
5. ಸಪ್ತಮಿ ವಿಭಕ್ತಿಯ ಕಾರಕಾರ್ಥವಿದು;
   ಎ) ಕರಣ ಬಿ) ಕರ್ಮ ಸಿ) ಅಧಿಕರಣ ಡಿ) ಸಂಪ್ರದಾನ
6. 'ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನಹಳ್ಳಿಗೆ ಹೋಗಿದ್ದರು' ವಾಕ್ಯವು ಈ ಕಾಲದಲ್ಲಿ ಪ್ರಯೋಗವಾಗಿದೆ –
   ಎ) ಭೂತಕಾಲ ಬಿ) ವರ್ತಮಾನ ಕಾಲ ಸಿ) ಭವಿಷ್ಯತ್ ಕಾಲ ಡಿ) ಭೂತನ್ಯೂನ ಕಾಲ

**II) ಕೊಟ್ಟಿರುವ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.** 4 X 1 = 4

7. ಮುಕ್ಕಣ್ಣ : ಬಹುವ್ರೀಹಿ ಸಮಾಸ :: ಭೀಮಾರ್ಜುನರು : ____________
8. ನಡೆಯುವ : ಕೃದಂತನಾಮ :: ಹಿರಿಮೆ : ____________
9. ವಿದ್ಯಾಧರ : ಬಿಜ್ಜೋದರ :: ವೈಶಾಖ : ____________
10. ನಡೆನಡೆ : ದ್ವಿರುಕ್ತಿ :: ಹಣಗಿಣ : ____________

**III) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 X 1 = 7**

11. ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು?
12. ಅಶೋಕ ಪೈರವರ ವೃತ್ತಿ ಯಾವುದು?
13. ಸ್ಟೋನ್ ಆಫ್ ಸ್ಕೋನ್ ಕಲ್ಲುಪಾಟಿಯನ್ನು ಯಾವ ಸಂದರ್ಭದಲ್ಲಿ ಬಳಸಲಾಗುತ್ತದೆ?
14. ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರೇನು?
15. ಕವಿ ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ಎಂದು ಹೇಳಿದ್ದಾರೆ?
16. ಹಲಗಲಿ ಗುರುತು ಉಳಿಯದಂತಾದದ್ದು ಏಕೆ?
17. ಯಾರ ಕಿವಿಗೆ ಉಪದೇಶವು ನಾಟುವುದಿಲ್ಲ?

**IV) ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 X 2 = 20**

18. ಕನ್ನಡ ಭಾಷೆ ಹದಗೊಂಡದ್ದು ಹೇಗೆ?
19. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
20. ರಾಹಿಲನು ಮುದುಕಿಯ ಸೊಸೆಗೆ ಚಿಕಿತ್ಸೆ ನೀಡಿದ ಬಗೆ ಹೇಗೆ?
21. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
22. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?
23. ಹಲಗಲಿಗೆ ದಂಡು ಬರಲು ಕಾರಣವೇನು?
24. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
25. ಭಗತ್‌ಸಿಂಗ್, ಜಲಿಯನ್ ವಾಲಾಬಾಗ್‌ನ ಮಣ್ಣಿನ ಕುರಿತು ತನ್ನ ತಂಗಿಗೆ ಏನೆಂದು ಹೇಳುತ್ತಾನೆ?

26. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?

27. ಮುದ್ದಣ ಕವಿ ಗೋವಿಂದ ಪೈಅವರಿಗೆ ಏನೆಂದು ಸಲಹೆ ಕೊಟ್ಟರು?

**V) ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 X 3 = 6**

28. ಪು.ತಿ.ನ.
29. ಪಂಪ

**VI) ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 X 3 =3**

30. ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲ್ಲಿನ್ನೇನು॥

**VII) ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1 X 3 =3**

31. ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ

**VIII) ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 X 3 =3**

32. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ **ಅಥವಾ** ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ

**IX) ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 X 3=18**

33. "ಮಡಿಯಬೇಕಾದರೆ ಮಾಡಿಯೇ ಮಡಿಯಬೇಕು"
34. "ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು."
35. "ಪಸರಂಗೊಟ್ಟೆನಿಲ್ಲಿದರ್ಕೆ ಮುಳಿಯದಿರಿಂ"
36. "ಎಚ್ಚರದಲಿ ಮುನ್ನಡೆಸೋಣ"
37. "ಎನಗೆ ನಿಮ್ಮಡಿಗಳಲಿ ಸಮಸೇವನೆಯೆ ದೇವ"
38. "ನಿಮಗೆ ಪೊಡೆಮಟ್ಟು ಪೋಪೀ ಸಮಕಟ್ಟಿಂ ಬಂದೆನ್"

**X) ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ 1 X 4 = 4**

39. ನೀಲಮೇಘಮಂಡಲ ______________
______________________________
______________________________
______________________________
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗಯುಗಗಳ ______________
______________________________
______________________________
______________________________
ಹಕ್ಕಿ ಹಾರುತಿದೆ ನೋಡಿದಿರಾ?

**XI) ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. 1 X 4 = 4**

40. ಆಶ್ವೀಜದ ಶಾಲಿವನದ
ಗಿಳಿಯೆದೆ ಬಣ್ಣದ ನೋಟ;
ಅದರೆಡೆಯಲಿ ಬನದಂಚಲಿ
ಕೊನೆವೆತ್ತಡಕೆಯ ತೋಟ

**XII) ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 X 4=8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

**ಅಥವಾ**

ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

42. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

**ಅಥವಾ**

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**XIII) ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 4 [ 2 + 2 ]**

ವಿದುರ ನೀತಿಯು ಮಹಾಭಾರತದ ಅತ್ಯಂತ ಉದ್ಬೋಧಕವಾದ ಒಂದು ಪ್ರಸಂಗ. ಇದರಲ್ಲಿ ವಿದುರನು ಧೃತರಾಷ್ಟ್ರನನ್ನು ಉದ್ದೇಶಿಸಿ ಇಹ–ಪರಗಳೆರಡಕ್ಕೂ ಕಲ್ಯಾಣವನ್ನುಂಟುಮಾಡಬಲ್ಲ ಅನೇಕ ಸಂಗತಿಗಳ ಬಗ್ಗೆ ತಿಳಿಸಿಕೊಡುತ್ತಾನೆ. ಮಹಾಭಾರತದ ಉದ್ಯೋಗಪರ್ವದಲ್ಲಿರುವ ವಿದುರ ನೀತಿಯಲ್ಲಿ ವ್ಯವಹಾರ, ಮಾತು, ನೀತಿ, ಸದಾಚಾರ, ಧರ್ಮ, ಸುಖ–ದುಃಖಗಳು ಪ್ರಾಪ್ತವಾಗುವ ಬಗೆಯನ್ನು ತಿಳಿಸಲಾಗಿದೆ. ಅಲ್ಲದೆ ಕರ್ಮದ ನಿರ್ಣಯ, ತ್ಯಾಗದ ಮಹಿಮೆ, ನ್ಯಾಯದ ಸ್ವರೂಪ ಸತ್ಯದ ಬಗೆಗೂ ತಿಳಿಸಲಾಗಿದೆ. ಮುಂದುವರಿದು ಪರೋಪಕಾರ ಕ್ಷಮೆ, ಅಹಿಂಸೆ, ಮಿತ್ರನ ಲಕ್ಷಣ, ಕೃತಘ್ನನಿಗೆ ಉಂಟಾಗುವ ದುರ್ದೆಸೆ ಮುಂತಾದವುಗಳ ಬಗ್ಗೆ ವರ್ಣನೆಯಿದೆ. ವಿದುರ ನೀತಿಯ ಒಂದು ಶ್ಲೋಕದ ಅರ್ಥ ಹೀಗಿದೆ. "ಮುಪ್ಪು ರೂಪವನ್ನು, ಆಸೆಯು ಧೈರ್ಯವನ್ನು, ಮೃತ್ಯುವು ಪ್ರಾಣವನ್ನು, ಅಸೂಯೆಯು ಧರ್ಮಾಚರಣೆಯನ್ನು, ಕಾಮವು ಲಜ್ಜೆಯನ್ನು, ನೀಚ ಮನುಷ್ಯರ ಸೇವೆಯು ಚಾರಿತ್ರ್ಯವನ್ನು, ಕೋಪವು ಸಂಪತ್ತನ್ನು ವಿನಾಶಗೊಳಿಸುತ್ತದೆ. ಶುದ್ಧ ಹಾಗೂ ಸುಖಮಯ ಜೀವನವನ್ನು ನಡೆಸಲು ಬಯಸುವ ವಿದ್ವಾಂಸ, ತರುಣ, ವೃದ್ಧ, ಬಾಲಕ, ಮಹಿಳೆ, ಶಾಸಕ, ಪ್ರಜೆ, ಧನಿಕ, ವಿದ್ಯಾರ್ಥಿ, ಶಿಕ್ಷಕ, ಸೇವಾವ್ರತೀ ಎಲ್ಲರಿಗೂ ವಿದುರನೀತಿಯ ಶ್ಲೋಕಗಳು ಅತ್ಯಂತ ಪ್ರಯೋಜನಕಾರಿಯಾಗಿವೆ.

ಪ್ರಶ್ನೆಗಳು:

43. ಅ) ವಿದುರ ನೀತಿಯ ಶ್ಲೋಕದಲ್ಲಿ ತಿಳಿಸಿರುವಂತೆ ವಿನಾಶಕ್ಕೆ ಕಾರಣವಾಗುವ ಅಂಶಗಳು ಯಾವುವು ?

ಆ) ವಿದುರ ನೀತಿಯಲ್ಲಿ ಯಾವ ಯಾವ ವಿಷಯಗಳ ಬಗ್ಗೆ ನಿರೂಪಿಸಲಾಗಿದೆ ?

**XIV) ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನಾಧರಿಸಿ ಪತ್ರ ಬರೆಯಿರಿ 1 X 5 = 5**

44. ನಿಮ್ಮನ್ನು ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಣಗಾಲು ಗ್ರಾಮದ ವೈಭವ ಎಂದು ಭಾವಿಸಿಕೊಂಡು, ನಿಮ್ಮ ಪ್ರದೇಶದಲ್ಲಿ ಉಂಟಾಗಿರುವ ಅತಿವೃಷ್ಟಿಗೆ ಪರಿಹಾರ ನೀಡುವಂತೆ ಕೋರಿ, ನಿಮ್ಮ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಕಾಳೇನಹಳ್ಳಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ರಾಜಲಕ್ಷ್ಮಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಹಮ್ಮಿಕೊಂಡಿರುವ ಪ್ರವಾಸಕ್ಕೆ 1500/– ರೂಗಳನ್ನು ನೀಡಲು ಚಾಮರಾಜನಗರ ಜಿಲ್ಲೆಯ ಚನ್ನಗಿರಿ ಗ್ರಾಮದಲ್ಲಿ ವಾಸವಾಗಿರುವ ಸೋಮಪ್ಪ ಎಂಬ ಹೆಸರಿನ ತಂದೆರವರಿಗೆ ಪತ್ರ ಬರೆಯಿರಿ.

**XV) ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. 1 X 5=5**

45. ಮಹಿಳಾ ಸಬಲೀಕರಣ

**ಅಥವಾ**

ಮಕ್ಕಳಲ್ಲಿ ಇರಬೇಕಾದ ಮೌಲ್ಯಗಳು